ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ

ಓದಿನ ಮನೆಗೆ ಹೋಗೋಣ

**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.**

---

ಸಂಖ್ಯೆ: ಕಪಂರಾಆ/ಅಭಿವೃದ್ಧಿ/453/2021 ದಿನಾಂಕ: 30.10.2021

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ **"ಓದುವ ಬೆಳಕು"** ಕಾರ್ಯಕ್ರಮದ ಅಂಗವಾಗಿ **'ಓದಿನ ಮನೆಗೆ ಹೋಗೋಣ'** ಎಂಬ ಅಭಿಯಾನವನ್ನು **1ನೇ ನವಂಬರ್ 2021** ರಿಂದ **26 ನೇ ಜನವರಿ 2022** ವರೆಗು ನಿರಂತರ ಚಟುವಟಿಕೆಗಳನ್ನು ಆಯೋಜಿಸುವ ಕುರಿತು

***

ತಮಗೆ ತಿಳಿದಿರುವಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮಕ್ಕಳನ್ನು ಓದುವುದು ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು "ಓದುವ ಬೆಳಕು" ಕಾರ್ಯಕ್ರಮವನ್ನು ಆರಂಭಿಸಿತು. ಸದರಿ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು, ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಗುರಿಯನ್ನು ಹೊಂದಲಾಗಿತ್ತು, ಗ್ರಂಥಾಲಯಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಈ ವರ್ಷವು **"ಓದುವ ಬೆಳಕು"** ಕಾರ್ಯಕ್ರಮದ ಅಂಗವಾಗಿ **1ನೇ ನವಂಬರ್ 2021 ರಿಂದ 26 ನೇ ಜನವರಿ 2022** ವರೆಗು **'ಓದಿನ ಮನೆಗೆ ಹೋಗೋಣ'** ಎಂಬ ಅಭಿಯಾನವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಸುಮಾರು 85 ದಿನಗಳ ಕಾಲ ಈ ಕೆಳಕಂಡ ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸುವ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಚ್ಚಿನ ಜನರು ಮತ್ತು ಮಕ್ಕಳು ಭಾಗವಹಿಸುವಂತೆ ಪ್ರೇರೆಪಿಸಿ ಎಲ್ಲಾ ಸಮುದಾಯದವರಿಗೂ ಅನುಕೂಲವಾಗುವಂತೆ ಗ್ರಂಥಾಲಯಗಳನ್ನು ಉನ್ನತೀಕರಿಸಲು ಆದೇಶಿಸಿದೆ.

- ಈ ಕೆಳಗಿನ ಚಟುವಟಿಕೆಗಳನ್ನು ಆಯೋಜಿಸಲು ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆಯು ಪೂರ್ವಭಾವಿ ಸಭೆಯನ್ನು ನಡೆಸಿ ನಿರ್ಧಿಷ್ಟ ಚಟುವಟಿಕೆಗಳ ಯೋಜನೆಯನ್ನು ತಯಾರಿಸಿ, ಸೂಕ್ತವೆನಿಸುವ ವಿಷಯಗಳಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸುವ ವಿಚಾರಗಳನ್ನು ಸಹ ಮನದಲ್ಲಿಟ್ಟುಕೊಂಡು. ಈ ಅಭಿಯಾನದ ಸಂಪೂರ್ಣ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆಯು ನಿರ್ವಹಿಸುವುದು

- **'ಓದಿನ ಮನೆಗೆ ಹೋಗೋಣ'** ಅಭಿಯಾನ ಎಲ್ಲಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಾಗ ಈ ಕೆಳಗಿನ ಲೋಗೋನ್ನು ಬಳಸುವುದು .

  **https://drive.google.com/file/d/143pADRZHYHllmSDmTRIMjLTfkK1T9rHw/view?usp=sharing**

- **'ಓದಿನ ಮನೆಗೆ ಹೋಗೋಣ'** ಅಭಿಯಾನದ ಚಟುವಟಿಕೆಗಳಲ್ಲಿ ಉತ್ತಮವಾಗಿ ಗುರುತಿಸಿಕೊಂಡ ಮಕ್ಕಳನ್ನು ಪ್ರೋತ್ಸಾಹಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅವರಿಂದ ಸಹಿ ಮಾಡಿದ ಪ್ರಶಂಸನಾ ಪತ್ರವನ್ನು ವಿತರಿಸುವುದು.

- ಪ್ರತಿ ತಾಲೂಕಿಗೆ ಒಂದು ಗ್ರಾಮ ಪಂಚಾಯಿತಿ ಗ್ರಂಥಾಲಯದಂತೆ ಈ ಕೆಳಗಿನ ಚಟುವಟಿಕೆಗಳನ್ನು ಉತ್ತಮವಾಗಿ ಆಯೋಜಿಸಿ ಈ ಅಭಿಯಾನದ ಗುರಿಯನ್ನು ತಲುಪಲು ತೊಡಗಿಸಿಕೊಂಡ ಗ್ರಾಮ ಪಂಚಾಯಿತಿಯ ಗ್ರಂಥಾಲಯವನ್ನು ಗುರುತಿಸಿ ಈ ಅಭಿಯಾನದ ಕುರಿತು ಸಂಪೂರ್ಣ ವರದಿಯನ್ನು ಪಡೆದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರಶಂಸನಾ ಪತ್ರವನ್ನು ನೀಡುವುದು

- ಈ ಅಭಿಯಾನದ ಎಲ್ಲಾ ಚಟುವಟಿಕೆಗಳನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯ ಆವರಣದಲ್ಲಿ ಆಯೋಜಿಸುವುದು ಮತ್ತು ಕೋವಿಡ್ ನಿಯಮಗಳನ್ನು ಪಾಲಿಸಿ ಈ ಅಭಿಯಾನವನ್ನು ಅತ್ಯಂತ ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.

**'ಓದಿನ ಮನೆಗೆ ಹೋಗೋಣ' ಅಭಿಯಾನದ ಚಟುವಟಿಕೆಗಳು/ ಕಾರ್ಯಕ್ರಮಗಳು;**

- 2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ 5623 ಗ್ರಂಥಾಲಯಗಳನ್ನು ಗ್ರಾಮೀಣ ಮಾಹಿತಿ ಮತ್ತು ಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಿಸಲಾಗುವುದು ಎಂದು ಘೋಷಿಸಲಾಗಿತ್ತು. ಇದರಂತೆ 5623 ಗ್ರಂಥಾಲಯಗಳನ್ನು ಅಗತ್ಯ ಸೌಲಭ್ಯಗಳೊಂದಿಗೆ ಉನ್ನತೀಕರಿಸುವುದು. ( ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಅ/ಅಭಿವೃದ್ಧಿ/14/2021 ದಿನಾಂಕ: 01.02.2021ರಲ್ಲಿ ತಿಳಿಸಿರುವಂತೆ )

- ಈಗಾಗಲೇ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಡಿಜಿಟಲೀಕರಣಗೊಳಿಸಲು ತಿಳಿಸಿದ್ದು. ಎಲ್ಲಾ ಅಮೃತ ಗ್ರಾಮಪಂಚಾಯಿತಿಗಳ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು 26 ನೇ ಜನವರಿ 2022 ರೊಳಗೆ ಡಿಜಿಟಲೀಕರಣಗೊಳಿಸುವುದು. (ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಕಪಂರಾಅ/ಪಂ.ರಾಜ್/175/2020-21 ದಿನಾಂಕ: 08.01.2021 ರಲ್ಲಿ ತಿಳಿಸಿರುವಂತೆ)

- ದೃಷ್ಟಿ ಸವಾಲಿಗೊಳಗಾದ ಮಕ್ಕಳಿಗೆ ಅನುಕೂಲವಾಗುವಂತೆ ಪ್ರತಿ ತಾಲ್ಲೂಕಿಗೊಂದರಂತೆ ಬ್ರೈಲ್ ಮತ್ತು ಶ್ರವ್ಯ ಪುಸ್ತಕಗಳನ್ನು ಒಳಗೊಂಡ ಬೀಕನ್(Beacon) ಗ್ರಂಥಾಲಯವನ್ನು 26 ನೇ ಜನವರಿ 2022ರೊಳಗೆ ಅಭಿವೃದ್ಧಿಪಡಿಸುವುದು. (ಸರ್ಕಾರದ ಅದೇಶ ಸಂಖ್ಯೆ: ಕಪಂರಾಅ/ಅಭಿವೃದ್ಧಿ/281/2021 ಬೆಂಗಳೂರು, ದಿನಾಂಕ 13.08.2021ರಲ್ಲಿ ತಿಳಿಸಿರುವಂತೆ)

- ಈಗಾಗಲೇ ರಾಜ್ಯದಲ್ಲಿ 10 ಲಕ್ಷಕ್ಕಿಂತ ಹೆಚ್ಚು ಮಕ್ಕಳು ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ನೊಂದಾಯಿತರಾಗಿರುತ್ತಾರೆ. **'ಓದಿನ ಮನೆಗೆ ಹೋಗೋಣ'** ಅಭಿಯಾನದಲ್ಲಿ ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ 30 ರಿಂದ 40 ಲಕ್ಷ ಮಕ್ಕಳನ್ನು ಗ್ರಂಥಾಲಯಕ್ಕೆ ಉಚಿತವಾಗಿ ನೋಂದಾಯಿಸುವುದು ಹಾಗೂ ಗ್ರಂಥಾಲಯಗಳಲ್ಲಿ ಮಕ್ಕಳ ಪ್ರತ್ಯೇಕ ವಿಭಾಗವನ್ನು ಅಭಿವೃದ್ಧಿಪಡಿಸುವುದು.

- ಪ್ರತಿವಾರದ ಶನಿವಾರದಂದು ಮಧ್ಯಾಹ್ನದ ವೇಳೆಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರಿಯರನ್ನು ಕರೆಸಿ ಮಕ್ಕಳಿಗೆ ಕಥೆ (ಕೃಷಿ, ತೋಟಗಾರಿಕೆ, ರೇಷ್ಮೆ, ಕರಕುಶಲ ಚಟುವಟಿಕೆಗಳ,ಹವಾಮಾನ ಬದಲಾವಣೆ ಸಂಬಂಧಿಸಿದ ಅಥವಾ ಇತರೆ ಯಾವುದೇ ವಿಷಯದಲ್ಲಿ) ಹೇಳುವ ಕಾರ್ಯಕ್ರಮವನ್ನು ಆಯೋಜಿಸುವುದು. ಸದರಿ ಚಟುವಟಿಕೆಗೆ ಮಕ್ಕಳನ್ನು ಗ್ರಂಥಾಲಯಕ್ಕೆ ಕರೆತರಲು ಅಂಗನವಾಡಿ ಕಾರ್ಯಕರ್ತರು ಮತ್ತು ಶಿಕ್ಷಕರು ಕ್ರಮವಹಿಸುವುದು.

- ಈಗಾಗಲೇ ರಾಜ್ಯದಿಂದ ಕಳುಹಿಸಿರುವ **'ಗುಂಡುತೋಪುಗಳೆತ್ತ ಹೋದವು?'** ಪುಸ್ತಕದಲ್ಲಿ ತಿಳಿಸಿರುವಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರಿಯರನ್ನು ಕರಿಸಿ ಗುಂಡುತೋಪುಗಳ ಬಗ್ಗೆ ಅಥವಾ ಗ್ರಾಮಗಳಲ್ಲಿ ಹಿಂದಿನ ದಿವಸಗಳು ಹೇಗಿದ್ದವು? ಎಂಬುದರ ಕುರಿತು ಕಥೆ ಹೇಳುವ ಕಾರ್ಯಕ್ರಮವನ್ನು ಮಕ್ಕಳಿಗೆ ಅನುಕೂಲವಾಗುವಂತೆ ಆಯೋಜಿಸುವುದು

- 'ಗುಂಡುತೋಪುಗಳೆತ್ತ ಹೋದವು?' ಪುಸ್ತಕ ಆಧಾರಿತ ಚಟುವಟಿಕೆಗಳ ಕಾರ್ಯ ಹಾಳೆಗಳನ್ನು( ವರ್ಕ್ ಶೀಟ್ ಗಳು) ಅಜಿಮ್ ಪ್ರೇಮ್ಜಿ ಫೌಂಡೇಶನ್ ಸಂಸ್ಥೆಯವರು ಮಕ್ಕಳಿಗಾಗಿ ತಯಾರಿಸಿದ್ದು. ಇದರಲ್ಲಿ ತಿಳಿಸಿರುವಂತೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯು ಮಕ್ಕಳಿಗಾಗಿ ಕಾರ್ಯಚಟುವಟಿಕೆಗಳನ್ನು ಆಯೋಜಿಸಿ ಮಕ್ಕಳಿಂದ ಕಾರ್ಯಚಟುವಟಿಕೆಗಳನ್ನು ಪೂರ್ಣಗೊಳಿಸುವುದು (ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ' ಕಥೆ ಪುಸ್ತಕ ಆಧಾರಿತ ಕಾರ್ಯಹಾಳೆಗಳು( ವರ್ಕ್ ಶೀಟ್ ಗಳು) )

- ಸ್ಥಳಿಯ NGO/ ನಾಗರೀಕ ಸಮಾಜ ಸಂಸ್ಥೆ/ ಸಮುದಾಯ ಆಧಾರಿತ ಸಂಸ್ಥೆಗಳ ಅಥವಾ ನುರಿತ ಸಂಪನ್ಮೂಲ ವ್ಯಕ್ತಿಗಳ ಸಹಕಾರದೊಂದಿಗೆ ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಮಕ್ಕಳಿಗೆ ಅನುಕೂಲವಾಗುವಂತೆ ಆಕಾಶ ವೀಕ್ಷಣೆ, ಹಕ್ಕಿ- ಪಕ್ಷಿಗಳ ವೀಕ್ಷಣೆ ಮತ್ತು ಇತರೆ ವಿಷಯಗಳ ಚಟುವಟಿಕೆಯನ್ನು ಆಯೋಜಿಸುವುದು

- ತೆರೆದ ಮನೆ ಎಂಬ ಹೆಸರಿನಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರಿಯರನ್ನು/ ವಿಷಯಕ್ಕೆ ಸಂಬಂಧಿಸಿದ ನುರಿತರನ್ನು ಕರೆಸಿ ಯಾವುದೇ ವಿಷಯಗಳ ಕುರಿತು ಅವರ ಅಭಿಪ್ರಾಯ ಗಳನ್ನೊಳಗೊಂಡ ವಿಷಯ ಮಂಡನೆಯ ಕಾರ್ಯಕ್ರಮವನ್ನು ಆಯೋಜಿಸುವುದು. ( ಧಾರ್ಮಿಕ ವಿಷಯಗಳನ್ನು ಹೊರತುಪಡಿಸಿ )

**1ನೇ ನವಂಬರ್ 2021 ರಂದು, ಕನ್ನಡ ರಾಜ್ಯೋತ್ಸವ; ಅಥವ ಈ ವಾರದಲ್ಲಿ;**

- ಕರ್ನಾಟಕ ಇತಿಹಾಸ ಕುರಿತಾದ ವಿಷಯಗಳಲ್ಲಿ ಮಕ್ಕಳಿಗೆ ಮುಂಚಿತವಾಗಿಯೇ ತಿಳಿದುಕೊಳ್ಳಲು (ತಯಾರಾಗಲು)ತಿಳಿಸಿ. ಈ ದಿನದಂದು ಮೂರರಿಂದ ಐದು ನಿಮಿಷಗಳ ಕಾಲ ಇತರ ಮಕ್ಕಳಿಗೆ ಓದಿ ಹೇಳುವ ಕಾರ್ಯಕ್ರಮವನ್ನು ಆಯೋಜಿಸುವುದು

- ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ಸ್ಥಳೀಯ ಸ್ವಾತಂತ್ರ ಹೋರಾಟಗಾರರ ಸ್ಮಾರಕಗಳಿರುವ ಸ್ಥಳಗಳಿಗೆ/ ಜಿಲ್ಲೆಯ ಅಥವಾ ತಾಲ್ಲೂಕಿನ ಸ್ಥಳಗಳಲ್ಲಿರುವ ವೀರಗಲ್ಲು ಗಳಿರುವ ಸ್ಥಳಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಭೇಟಿ ಮಾಡಿಸುವುದು ಹಾಗೂ ಬೇಟಿ ನೀಡಿದ ಸ್ಥಳದ ಮಹತ್ವ ಕುರಿತು ತಿಳಿಸುವುದು

- ಕರ್ನಾಟಕ ಇತಿಹಾಸ ಕುರಿತಾದ ಮತ್ತು ರಾಜ್ಯದ ಇತರೆ ಜಿಲ್ಲೆಗಳ ಪರಿಚಯ ಕುರಿತಾದ ವಿಷಯದಲ್ಲಿ ಕಾಲೇಜಿನ ಪ್ರಾಂಶುಪಾಲರು/ ಉಪನ್ಯಾಸಕರು/ ಇತರೆ ಯಾವುದೇ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಮಕ್ಕಳಿಗೆ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸುವುದು

- ಜಗತ್ತಿನ/ ದೇಶದ/ ರಾಜ್ಯದ ಇತಿಹಾಸ ಕುರಿತಾದ ವಿಷಯಗಳಲ್ಲಿ ಪುಸ್ತಕ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸುವುದು

- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಯ ಶಿಕ್ಷಕರುಗಳನ್ನು ಕರಿಸಿ National Talent Search Examination (NTSE) ಕುರಿತಾದ ಮಾರ್ಗದರ್ಶನ ಚಟುವಟಿಕೆಯನ್ನು ಆಯೋಜಿಸುವುದು

**14ನೇ ನವೆಂಬರ್ 2021, ಮಕ್ಕಳ ದಿನಾಚರಣೆ; ಅಥವ ಈ ವಾರದಲ್ಲಿ;**

- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಎನ್.ಎಸ್.ಎಸ್. ಸ್ವಯಂಸೇವಕರುಗಳ ಸಹಾಯ ಪಡೆದು ಮಕ್ಕಳ ಹಕ್ಕುಗಳ ಮತ್ತು ರಕ್ಷಣೆ ಕುರಿತಾದ ಸಾಂಸ್ಕೃತಿಕ ಚಟುವಟಿಕೆಯನ್ನು ಆಯೋಜಿಸುವುದು.

- 14 ನೇ ನವಂಬರ್ 2021 ರಂದು ಪ್ರಾರಂಭವಾಗಿ ಈ ವಾರವನ್ನು ಮಕ್ಕಳ ಹಕ್ಕುಗಳ ವಾರ ಎಂದು ತಿಳಿದು, ಪ್ರತಿ ಮಗುವಿಗೆ ಆಸಕ್ತಿ ಇರುವ ವಿಷಯದಲ್ಲಿ ಏನಾದರೂ ಚಟುವಟಿಕೆಯನ್ನು ತೊಡಗಿಸಿಕೊಳ್ಳಲು ತಿಳಿಸುವುದು ಹಾಗೂ ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಕೈಗೊಂಡ ಚಟುವಟಿಕೆಯ ಕುರಿತು ಇತರೆ ಮಕ್ಕಳಿಗೆ ತಿಳಿಸುವ ಕಾರ್ಯಕ್ರಮವನ್ನು ಆಯೋಜಿಸುವುದು.

- 20ನೇ ನವಂಬರ್ 2021 ರಂದು ಅಂತರಾಷ್ಟ್ರೀಯ ಮಕ್ಕಳ ದಿನಾಚರಣೆಯೆಂದು, ಮಕ್ಕಳ ಹಕ್ಕುಗಳ ಕುರಿತಾದ ಮತ್ತು ಮಕ್ಕಳಿಗೆ ಸಂಬಂಧಿಸಿದ ಕಾನೂನಿನ ಅರಿವಿನ ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಸೂಕ್ತವೆನಿಸುವ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸುವುದು. ಉದಾಹರಣೆಗೆ ಪೋಕ್ಸೋ ಕಾಯ್ದೆ, ಸೈಬರ್ ಕ್ರೈಂ, ಸಾಮಾಜಿಕ ಜಾಲತಾಣ etc.

- ಮಕ್ಕಳುಗಳು, ಮಾಡೆಲ್ ಗಳನ್ನು ಮಾಡುವುದು, ಕರಕುಶಲ ವಸ್ತುಗಳ( ಕ್ರಾಫ್ಟ್) ತಯಾರಿ ಮತ್ತು ಅವುಗಳನ್ನು ಗ್ರಂಥಾಲಯದಲ್ಲಿ ಪ್ರದರ್ಶಿಸುವುದು.

- ಗ್ರಾಮದ ಬಗ್ಗೆ, ಗ್ರಾಮ ಪಂಚಾಯತ್ ಬಗ್ಗೆ, ಗ್ರಾಮದಲ್ಲಿರುವ ಮಕ್ಕಳ ಸ್ಥಿತಿಗಳ ಬಗ್ಗೆ, ಅವರ ಕನಸಿನ ಗ್ರಾಮ, ಕನಸಿನ ಶಾಲೆಯ ಕುರಿತಾಗಿ ಕಥೆಯನ್ನು ರಚಿಸುವುದು/ ಬರೆಯುವುದು

- ಮಕ್ಕಳು ಅವರ ಕೌಶಲ್ಯ ಆಧಾರಿತ ಚಟುವಟಿಕೆಯನ್ನು ಪ್ರಸ್ತುತಪಡಿಸಿ ಕೊಲಾಜ್ ಮಾಡಿ ಪ್ರದರ್ಶಿಸುವುದು( ಚಿತ್ರ, ಹಾಡು, ಕಥೆ, ರೇಖಾಚಿತ್ರ, ಕಿರುನಾಟಕ ಇತ್ಯಾದಿ)

- ಗ್ರಾಮ ಪಂಚಾಯಿತಿ ಗ್ರಂಥಾಲಯದ ಆವರಣದಲ್ಲಿ ಪುಸ್ತಕಗಳ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸುವುದು. ಈ ಕಾರ್ಯಕ್ರಮಕ್ಕೆ ಹೆಚ್ಚಿನದಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನರುಗಳು/ ಮಕ್ಕಳು ಸೇರುವುದಾಗಿ ಕ್ರಮವಹಿಸುವುದು

**10ನೇ ಡಿಸೆಂಬರ್ 2021ರಂದು, ಮಾನವ ಹಕ್ಕುಗಳ ದಿನ; ಅಥವ ಈ ವಾರದಲ್ಲಿ;**

- ಆಸಕ್ತಿವುಳ್ಳ ಮಕ್ಕಳಿಗೆ ಮಾನವ ಹಕ್ಕುಗಳ ಕುರಿತಾದ ವಿಷಯಗಳಲ್ಲಿ ಮಕ್ಕಳಿಗೆ ಸಂಬಂಧಿಸಿದ ಯಾವುದೇ ವಿಷಯಗಳಲ್ಲಿ ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರಿಸುವ / ಪ್ರಬಂಧ ಬರೆಯುವ ಕಾರ್ಯಕ್ರಮವನ್ನು ಆಯೋಜಿಸುವುದು. ಮಕ್ಕಳು ಬರೆದ ಪ್ರಾಜೆಕ್ಟ್ ರಿಪೋರ್ಟ್/ ಪ್ರಬಂಧವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯದ ನೋಟಿಸ್ ಬೋರ್ಡ್ ನಲ್ಲಿ ಪ್ರದರ್ಶಿಸುವುದು.

- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ಕ್ರಿಯಾಶೀಲ ಚಟುವಟಿಕೆಯಲ್ಲಿ ಉತ್ತಮ ಇರುವವರನ್ನು ಕರೆಸಿ ಮಕ್ಕಳಿಗೆ ಕ್ರಿಯಾಶೀಲ ಚಟುವಟಿಕೆಯ ಕುರಿತು ತಿಳಿಸುವ ಕಾರ್ಯಕ್ರಮವನ್ನು ಆಯೋಜಿಸುವುದು

**1ನೇ ಜನವರಿ 2022ರಂದು, ಹೊಸ ವರ್ಷದ ದಿನ; ಅಥವ ಈ ವಾರದಲ್ಲಿ;**

- ಮಕ್ಕಳಿಗೆ ಕರಿಯರ್ ಗೈಡೆನ್ಸ್ ನ ಕುರಿತಾದ ಅಥವಾ ಶಾಲೆ / ಪಿಯುಸಿ/ ಡಿಪ್ಲೋಮೋ/ ಐಟಿಐ ಮುಗಿಸಿದ ನಂತರ ಮಕ್ಕಳು ಏನು ಮಾಡಬೇಕು, ಯಾವ ಯಾವ ಕೆಲಸಗಳು ಮಾಡಬಹುದು, ಕೌಶಲ್ಯಕ್ಕೆ ಸಂಬಂಧಿಸಿದ ಕುರಿತಾದ ಉಪನ್ಯಾಸ ಕಾರ್ಯಕ್ರಮವನ್ನು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಆಯೋಜಿಸುವುದು.

- ಗ್ರಾಮ ಪಂಚಾಯಿತಿ ಗ್ರಂಥಾಲಯ ಆವರಣದಲ್ಲಿ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಡಾಕ್ಯುಮೆಂಟರಿ ಅಥವಾ ಸಿನಿಮಾವನ್ನು ಪ್ರದರ್ಶಿಸುವುದು

**24 ನೇ ಜನವರಿ 2022, ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ; ಅಥವ ಈ ವಾರದಲ್ಲಿ;**

- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರನ್ನು ಕರೆಸಿ ಹೆಣ್ಣುಮಕ್ಕಳಿಗೆ/ ಮಹಿಳೆಯರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸುವುದು. ವೈದ್ಯರು ಋತುಸ್ರಾವದ ಶುಚಿತ್ವದ ನಿರ್ವಹಣೆ ಮತ್ತು ವೈಯಕ್ತಿಕ ಸುರಕ್ಷತೆ (Menstrual Hygiene Management)ಕುರಿತು ಮಕ್ಕಳಿಗೆ/ಮಹಿಳೆಯರಿಗೆ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸುವುದು.

- Good Touch and Bad Touch ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ ಕುರಿತಾದ ವಿಷಯಗಳಲ್ಲಿ ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಕಾರ್ಯಕ್ರಮವನ್ನು ಆಯೋಜಿಸುವುದು.

- ಮಹಿಳೆಯರು ಯಾವುದೇ ವಿಷಯಗಳಲ್ಲಿ ಸಾಧನೆ ಮಾಡಿರುವ ಕುರಿತು ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸುವುದು.

- ಯಾವುದೇ ವಿಷಯದಲ್ಲಿ/ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರ ಕುರಿತಾದ ಡಾಕ್ಯೂಮೆಂಟರಿ ಅಥವಾ ಸಿನಿಮಾವನ್ನು ಪ್ರದರ್ಶಿಸುವ ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಆಯೋಜಿಸುವುದು.

**26ನೇ ಜನವರಿ 2022, ಗಣರಾಜ್ಯೋತ್ಸವ ದಿನ ;**

- ಸಂಸತ್/ವಿಧಾನಸಭೆ ನಡೆಯುವ ರೀತಿಯಲ್ಲಿ ಅಣಕು ಸಂಸತ್ /ವಿಧಾನಸಭೆಯನ್ನು ರಾಜ್ಯಶಾಸ್ತ್ರ ಉಪನ್ಯಾಸಕರಿಂದ ಮಕ್ಕಳಿಗೆ ಗ್ರಾಮ ಪಂಚಾಯತಿ ಗ್ರಂಥಾಲಯದಲ್ಲಿ ಅಣಕು ಸಂಸತ್ / ವಿಧಾನಸಭೆಯನ್ನು ಆಯೋಜಿಸುವುದು.
- ಭಾರತ ಸ್ವಾತಂತ್ರ್ಯದ ಕುರಿತು ಚಿಕ್ಕ ಕಥೆಗಳನ್ನು ಮಕ್ಕಳಿಗೆ ತಿಳಿಯುವಂತೆ ಕಾರ್ಯಕ್ರಮವನ್ನು ಆಯೋಜಿಸುವುದು

**ಈ ಮೇಲಿನ ಕಾರ್ಯಕ್ರಮಗಳಿಗೆ/ಚಟುವಟಿಕೆಗಳಿಗೆ ತಗಲುವ ಸಣ್ಣ ಪುಟ್ಟ ವೆಚ್ಚಗಳನ್ನು ಗ್ರಾಮ ಪಂಚಾಯಿತಿ ಸ್ವಂತ ನಿಧಿಯಿಂದ ಭರಿಸಲು ತಿಳಿಸಿದೆ.**

ತಮ್ಮ ವಿಶ್ವಾಸಿ,

20/10/2021

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

**ಇವರಿಗೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು.
2. ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳು (ಆಯಾ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಈ ಸುತ್ತೋಲೆ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.)
3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು(ಆಯಾಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಂಥಾಲಯಗಳಿಗೆ ಈ ಸುತ್ತೋಲೆಯ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.)
4. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರಿಗೆ ಸೂಕ್ತ ಬೆಂಬಲ ಮತ್ತು ಸಹಕಾರ ನೀಡಲು ಕ್ರಮವಹಿಸುವುದು.
5. ಮಾಹಿತಿ ಕೇಂದ್ರ/ವೆಬ್‌ಸೈಟ್, ಗ್ರಾಅಪ ಇಲಾಖೆ.

**ಪ್ರತಿ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.-560 001
2) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.-560 001